# ನಗರಸಭೆ, ಚಿಕ್ಕಮಗಳೂರು

## “ಮಲೇರಿಯಾ ಮಾಸಾಚರಣೆ – 2009”

ಚಿಕ್ಕಮಗಳೂರು ನಗರ ವ್ಯಾಪ್ತಿಯಲ್ಲಿ ಸ್ವಚ್ಛತೆಯನ್ನು ಕಾಯ್ದುಕೊಂಡು ಮುಂದೆ ತಲೆದೋರಬಹುದಾದ ಮಲೇರಿಯಾ, ಚಿಕೂನ್ ಗುನ್ಯಾ, ಡೆಂಗ್ಯೂ, ಹಂದಿ ಜ್ವರ (H1N1)ಹಾಗೂ ಸಾಂಕ್ರಮಿಕ ರೋಗಗಳು ಬಾರದಂತೆ ಹೆಚ್ಚರವಹಿಸಲು ದಿನಾಂಕ:25/06/2009 ರಿಂದ “ನಗರ ಸ್ವಚ್ಛತಾ ಆಂದೋಲನ” ವನ್ನು ಹಮ್ಮಿಕೊಳ್ಳುವ ಮೂಲಕ ಮಲೇರಿಯಾ ಮಾಸಾಚರಣೆ ಸಾಂಕ್ರಮಿಕ ರೋಗವನ್ನು ತಡೆಗಟ್ಟುವ ಬಗ್ಗೆ ಸಾರ್ವಜನಿಕರು ಈ ಕೆಳಕಂಡಂತೆ ಸಹಕರಿಸಿ ಸಾಂಕ್ರಮಿಕ ರೋಗಗಳನ್ನು ತಡೆಗಟ್ಟುವ ಕಾರ್ಯವನ್ನು ಯಶಸ್ವಿ ಗೊಳಿಸಲು ಕೋರಿದೆ.

- ☞ ರಸ್ತೆ ಬದಿಗಳಲ್ಲಿ ಹಣ್ಣುಗಳನ್ನು ಕತ್ತರಿಸಿ ಮಾರಾಟ ಮಾಡಬಾರದು ಹಾಗೂ ಸಾರ್ವಜನಿಕರು ರಸ್ತೆ ಬದಿಯಲ್ಲಿ ಮಾರಾಟ ಮಾಡುವ ಕತ್ತರಿಸಿದ ಹಣ್ಣು, ಆಹಾರ ಪದಾರ್ಥಗಳನ್ನು ಸೇವಿಸಬಾರದು.
- ☞ ಹೋಟೆಲ್ ಮಾಲೀಕರು ಗ್ರಾಹಕರಿಗೆ ಕುಡಿಯಲು ಬಿಸಿ ನೀರು ಕೊಡಬೇಕು ಮತ್ತು ಪತ್ರೆಪರಿಕರಗಳನ್ನು ಕುದಿಯುವ ಬಿಸಿ ನೀರಿನಲ್ಲಿ ಸ್ವಚ್ಛಗೊಳಿಸಬೇಕು.
- ☞ ಸಾರ್ವಜನಿಕರು ಮನೆಯಲ್ಲಿ ಶುದ್ದವಾದ ನೀರನ್ನು ಕುಡಿಯಬೇಕು ಅಥವ ಕುದಿಸಿ ಆರಿಸಿದ ನೀರನ್ನು ಕುಡಿಯಬೇಕು.
- ☞ ಸಾರ್ವಜನಿಕರು ತಮ್ಮ ಮನೆಯ ತೊಟ್ಟಿಗಳನ್ನು ವಾರಕೊಮ್ಮೆ ಸ್ವಚ್ಛಗೊಳಿಸಿ ಒಣಗಿಸಿ ನಂತರ ನೀರು ತುಂಬಿಸಬೇಕು ಹಾಗೂ ವ್ಯವಸ್ಥಿತವಾಗಿ ಮುಚ್ಚಬೇಕು.
- ☞ ತಮ್ಮ ಮನೆಗಳ ಮೇಲೆ ಹಾಗೂ ಸುತ್ತಮುತ್ತ ಟೈಯರ್, ಪ್ಲಾಸ್ಟಿಕ್, ಬಾಟಲ್‌ಗಳು ಎಳೆನೀರು ಚಿಪ್ಪು, ಸೊಪ್ಪು ಪೊದೆಗಳಲ್ಲಿ ನೀರು ನಿಲ್ಲದಂತೆ ಸ್ವಚ್ಛಗೊಳಿಸಿಕೊಂಡು ಸ್ವಚ್ಛ ಗೊಳಿಸಿದ ತ್ಯಾಜ್ಯವನ್ನು ನಗರಸಭೆ ಗಂಟೆಗಾಡಿಗಳಿಗೆ ನೀಡುವುದು.
- ☞ ಮನೆಯಲ್ಲಿ ಕೊಳತ ತರಕಾರಿ, ಹಣ್ಣು-ಹಂಪಲು ಹಾಗೂ ಸಿಪ್ಪೆಗಳನ್ನು ರಸ್ತೆಗೆ ಎಸೆಯದೆ ಗಂಟೆಗಾಡಿಗಳಿಗೆ ನೀಡುವುದು.
- ☞ ಮನೆಯ ಮುಂದೆ ನಲ್ಲಿ/ಬೋರವೆಲ್ ಇದ್ದಲ್ಲಿ ಅದರ ಸುತ್ತಮುತ್ತ ನೀರು ನಿಲ್ಲದಂತೆ ನೋಡಿಕೊಳ್ಳುವುದು.
- ☞ ಪಾತ್ರೆಪರಿಕರಗಳು, ಜಾನುವಾರುಗಳು, ಬಟ್ಟೆ ಇತ್ಯಾದಿಗಳನ್ನು ತೆರೆದ ಪ್ರದೇಗಳಲ್ಲಿ ತೊಳೆಯಬಾರದು.
- ☞ ಖಾಲಿ ನಿವೇಶನದಾರರು ತಮ್ಮ ನಿವೇಶನಗಳನ್ನು ಸ್ವಚ್ಛಗೊಳಿಸಿಕೊಳ್ಳುವುದು.
- ☞ ತಮ್ಮ ಮನೆಗಳಲ್ಲಿ ಸೊಳ್ಳೆ ನಿರೋದಕಗಳು, ಸೊಳ್ಳೆ ಪರದೆಗಳನ್ನು ಖಡ್ಡಾಯವಾಗಿ ಬಳಸುವುದು.
- ☞ ಮನೆಗಳಲ್ಲಿ ನೊಣಗಳು ಯಾವುದೇ ಆಹಾರ ಪದಾರ್ಥಗಳ ಮೇಲೆ ಕೂರದಂತೆ ಕ್ರಮವಹಿಸುವುದು.
- ☞ ಮಕ್ಕಳು ಮಲ-ಮೂತ್ರವನ್ನು ರಸ್ತೆ ಚರಂಡಿ ಮತ್ತು ತೆರದ ಪ್ರದೇಶದಲ್ಲಿ ವಿಸರ್ಜಿಸದಂತೆ ನೋಡಿಕೊಳ್ಳುವುದು.
- ☞ ಶೌಚಾಲಯದ ರೊಚ್ಚನ್ನು ತೆರದ ಚರಂಡಿಗಳಿಗೆ ಬಿಡಬಾರದು.
- ☞ ಯಾವುದೇ ಜ್ವರ, ವಾಂತಿ, ಭೇದಿ ಕಂಡು ಬಂದಲ್ಲಿ ತಕ್ಷಣವೇ ಹತ್ತಿರದ ಆಸ್ಪತ್ರೆಗಳಲ್ಲಿ ಪರೀಕ್ಷಿಸಿಕೊಳ್ಳುವುದು.
- ☞ ಮಾಂಸ ಮತ್ತು ಮೀನು ಅಂಗಡಿ ಮಾಲೀಕರು ರೋಗಗ್ರಸ್ಥ ಕುರಿ, ಕೋಳಿ, ಮೀನುಗಳನ್ನು ಮಾರಾಟ

ಮಾಡಬಾರದು.

- ಅರೆಬೆಂದ ಮಾಂಸ, ಮೀನುಗಳನ್ನು ಸೇವಿಸಬಾರದು.
- ತಮ್ಮ ಮನೆಯ ವರಾಂಡದಲ್ಲಿರುವ ಹೂಗಿಡಗಳಿಗೆ ಮತ್ತು ಕುಂಡಗಳಿಗೆ ಕೀಟಾನಾಶಕ ಸಿಂಪಡಿಸಿಕೊಳ್ಳುವುದು.
- ಪ್ಲಾಸ್ಟಿಕ್ ಚೀಲಗಳ ಬದಲಿಗೆ ಕಾಗದದ ಚೀಲ, ಬಟ್ಟೆ ಚೀಲಗಳನ್ನು ಬಳಸುವುದು.
- ಹಂದಿಗಳನ್ನು ನಗರದ ಹೊರಬಾಗದಲ್ಲಿ ವವ್ಯಸ್ಥಿತವಾಗಿ ಸಾಕಣಿಕೆ ಮಾಡಿಕೊಳ್ಳುವ ಮೂಲಕ ನಗರಸಭೆಯೊಂದಿಗೆ ಸಹಕರಿಸುವುದು.
- ಸಾರ್ವಜನಿಕರು ನಗರಸಭೆಗೆ ಸಂಬಂಧಿಸಿದ ಯಾವುದೇ ದೂರುಗಳಿದ್ದಲ್ಲಿ ದೂರವಾಣಿ ಸಂಖ್ಯೆ 232222 ಗೆ ಕರೆಮಾಡಿ ದೂರು ದಾಖಲಿಸಲು ಕೋರಿದೆ.